ಮಾಡ್ತಿನಿ. ಅದರ ಬಗ್ಗೆ ನಿಮಗ ಸಂಶಯನ ಬ್ಯಾಡ. ಏನ ಬರ್ಲಿ ಅದಕ್ಕ ನಾನ ಹೋರಾಡತಿನಿ..ಆದ್ರ ನೀವ ಮಾತ್ರ ನಿಮ್ಮ ಮಾತ ಹಿಂದಕ್ಕ ತಗೋಬೇಕ ಸರ್'

'ಅಯ್ತು, ನನಗ ಗೊತ್ತು, ನೀವೊಬ್ಬ ಸಮಾಜಮುಖಿ ಸಾಹಿತಿ. ಆ ಕಾರಣದಿಂದನ ನನ್ನ ಮೂಕ ಭಾಷೆ, ಮನದಾಗಿನ ಅಳಲ ಬ್ಯಾರೆಯವರಿಗಿಂತ ನಿಮಗ ಜಲ್ದಿ ಕೇಳಿದ್ದು, ಅರ್ಥವಾಗಿದ್ದು. ನಿಮ್ಮ ಮಾತಿನ ಮ್ಯಾಲ ಭರೂಸ ಐತಿ ನನಗ. ದಯಮಾಡಿ ಆ ಕೆಲಸ ಜರೂರ ಮಾಡ್ರಿ. ಹಾಗಾದ್ರೂ ಅವಳ ಆತ್ಮಕ ಶಾಂತಿ ಸಿಗಲಿ...'

'ತಮಗ ಅದರ ಯೋಚ್ನಾ ಬ್ಯಾಡ ಸರ್. ಎಂಥ ತ್ರಾಸ ಬರಲಿ. ಶಶಿರೇಖಾಳ ಸಾವಿಗೆ ನ್ಯಾಯ ಕೊಡಿಸೋ ಜವಾಬ್ದಾರಿ ನನ್ನದದ. ನಿಮ್ಮ ಮೂರ್ತಿ ಮಾತ್ರ ಇಲ್ಲೇ ನಮ್ಮ ಕಣ್ಣ ಮುಂದ ಇರ್ಬೇಕ..'ಎಂದು ಪ್ರತಿಮೆಗೆ ನಮಸ್ಕರಿಸುತ್ತಾ ಜಗದೀಶ ಮೇಲೆದ್ದ.

*

ಪ್ರತಾಪ್ ಮೋಹನ್ ಅವರಿಗೆ ಜಗದೀಶ ಮಾತು ಕೊಟ್ಟು ಬಂದಂತೆ ಶಶಿರೇಖಾಳ ಪ್ರಕರಣ ಕುರಿತು ಬೇಗ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲ ಅಧಿಕಾರಿಗಳಿಗೂ ಭೇಟಿಯಾಗಿ ಬಂದ. ಜೊತೆಗೆ ಅವಳ ಹಿನ್ನೆಲೆ ತಿಳಿದುಕೊಂಡಾಗ ಅವಳು ಬೇರೆ ಯಾರೂ ಆಗಿರದೆ ಮಿಲಿಟರಿಯಲ್ಲಿರುವ ತನ್ನ ಶಿಷ್ಯ ಭರತನ ತಂಗಿಯೇ ಆಗಿದ್ದಳು. ಆ ವಿಷಯ ಕೇಳಿ ಜಗದೀಶನಿಗೆ ಇನ್ನಷ್ಟು ದುಃಖ ಆಯಿತು. ಹಾಗೆಯೇ ಭರತನ ಜೊತೆ ಮಾತನಾಡಿ ಅವನಿಗೆ ಸಾಂತ್ವನ ಹೇಳಿದ. ಹಾಗೆಯೇ ತನ್ನ ಕಾಲೇಜಿನ ಕಾರ್ಯದೊಂದಿಗೆ ಶಶಿರೇಖಾಳ ಕೇಸಿನ ಬಗ್ಗೆಯೂ ಅನೇಕರಿಗೆ ಭೇಟಿಯಾದ. ಆತ ಜಿಲ್ಲಾಧಿಕಾರಿ ಕಚೇರಿಯಲ್ಲಿ ಮನವಿ ಕೊಟ್ಟು ಬಂದ. ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿಗೂ ಹೋಗಿ ತನಿಖೆಯ ಮಾಹಿತಿ ಪಡೆದ ಬಂದ. ಅವರೇನೋ ಕೂಡಲೇ ಆರೋಪಿಯನ್ನು ಬಂಧಿಸುವುದಾಗಿ ಹೇಳಿದರೇನೋ ನಿಜ. ಆದರೆ ಚಂದ್ರಶೇಖರ ನಾಪತ್ತೆಯಾಗಿ ಚಾಲಾಕಿತನದಿಂದ ಸಿಗದೆ ತಲೆಮರೆಸಿಕೊಂಡು ನಾಪತ್ತೆಯಾಗಿ ಬಿಟ್ಟಿದ್ದ.



ಜೊತೆಗೆ ಅವನ ಹಿಂದೆ ಇನ್ನಿಬ್ಬರೂ ಇರುವುದು ಅವರ ಗಮನಕ್ಕೆ ಬರಲೇ ಇಲ್ಲ.

ಹಲವಾರು ದಿನಗಳಾದರೂ ಪ್ರಕರಣ ಕುರಿತು ಯಾವುದೇ ಪ್ರಗತಿಯ ಸುಳಿವು ಸಿಗದಾದಾಗ ಜಗದೀಶನಿಗೆ ಪ್ರತಿಭಟನೆ ಮಾಡದೆ ಬೇರೆ ದಾರಿ ಇಲ್ಲದಾಯಿತು. ಕೊನೆಗೆ ಸರ್ಕಲ್ ಹತ್ತಿರವೇ ಇರುವ ಜಿಲ್ಲಾಧಿಕಾರಿ ಕಚೇರಿಗೆ ಮತ್ತೊಮ್ಮೆ ಮನವಿ ಕೊಟ್ಟು ಪ್ರತಿಭಟನೆ ಶುರು ಮಾಡಿದ. ಆತನ ಜೊತೆ ಅನೇಕ ಮಹಿಳಾ ಸಂಘಟನೆಗಳು, ಅವುಗಳ ಪದಾಧಿಕಾರಿಗಳು ಸಕ್ರಿಯವಾಗಿ ಬಂದು ಸೇರಿದರು. ಜೊತೆಗೆ ಬೇರೆ ಬೇರೆ ತಾಲ್ಲೂಕಿನ ಇತರೆ ಸಂಘಗಳು ಸೇರಿಕೊಂಡವು. ಅಷ್ಟೇ ಅಲ್ಲದೆ ಶಶಿರೇಖಾಳ ಊರಿನ ಅವಳ ಕಾಲೇಜಿನ ವಿದ್ಯಾರ್ಥಿ, ವಿದ್ಯಾರ್ಥಿನಿಯರು, ಜಿಲ್ಲಾ ಕೇಂದ್ರದ ಅನೇಕ ಕಾಲೇಜಿನ ವಿದ್ಯಾರ್ಥಿಗಳು ಬಂದು ಸೇರಿದಾಗ ಪ್ರತಿಭಟನೆಯ ಕಾವು ಇನ್ನಷ್ಟು ಹೆಚ್ಚಾಯಿತು. ಈ ಪ್ರತಿಭಟನೆಯು ಜಿಲ್ಲಾ ಆಡಳಿತಕ್ಕೆ ಸವಾಲಿನದಾಯಿತು. ಜೊತೆಗೆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಹಾಜರಾತಿ ಇಲ್ಲದೆ ಎಲ್ಲಾ ಕಾಲೇಜುಗಳು ಬಿಕೋ ಎನ್ನುವಂತಾಗಿ ಪಾಠಗಳೇ ನಡೆಯದಂತಾದವು. ಆ ಕಾರಣದಿಂದಲೇ ಜಗದೀಶನಿಗೆ ಪ್ರತಿಭಟನೆ ಕೈಬಿಡಲು ಕೇಳಿದಾಗ 'ನಾವು ಶಾಂತಿಯಿಂದ ಪ್ರತಿಭಟನೆ ಮಾಡಾಕ್ಹತ್ತಿವಿ. ಇದರಿಂದ ಯಾರಿಗೂ ತ್ರಾಸಿಲ್ಲ. ಬೇಕಾದ್ರೆ ವಿದ್ಯಾರ್ಥಿಗಳು ಕಾಲೇಜಿಗೆ ಹೋಗ್ಲಿ, ಆದ್ರ ತಮ್ಮ ಪ್ರತಿಭಟನೆ ಮಾತ್ರ ನಿಲ್ಲೋದಿಲ್ಲ..' ಎಂದಾಗ ಇಲಾಖೆಯು ನಿರುಪಾಯವಾಗಬೇಕಾಯಿತು. ವಿದ್ಯಾರ್ಥಿಗಳಿಗೆ ಕಾಲೇಜಿಗೆ ಹೋಗಲು ಹೇಳಿದರೂ ಯಾರೊಬ್ಬರೂ ಶಶಿರೇಖಾಳ ಸಾವಿಗೆ ನ್ಯಾಯ ಸಿಗುವವರೆಗೂ ತಾವು ಯಾರೂ ಹೋಗುವುದಿಲ್ಲವೆಂದು ಪ್ರತಿಭಟನೆಯಲ್ಲಿ ಇನ್ನಷ್ಟು ಬೃಹತ್ ಸಂಖ್ಯೆಯಲ್ಲಿ ಭಾಗಿಯಾದರು. ಪ್ರತಿಭಟನೆ ಶಾಂತಿಯುತವಾಗಿ ಮುಂದುವರೆಯಿತು. ಆ ಕಾರಣದಿಂದಲೆ ಆರೋಪಿ ಚಂದ್ರಶೇಖರನನ್ನು ಆದಷ್ಟು ಬೇಗ ಬಂಧಿಸಲು ಒತ್ತಡ ಬಿದ್ದಿತು.